ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
2 ನೇ ಮಹಡಿ, ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು-560009
ಸದಸ್ಯ ಕಾರ್ಯದರ್ಶಿಗಳ ಮೊಬೈಲ್ ಸಂಖ್ಯೆ: 9141193927
ಟೆಲಿಫೋನ್ : ಫ್ಯಾಕ್ಸ್ ಸಂಖ್ಯೆ: 080-22222919
E-mail : dlsablrrural@gmail.com

No. DLSA/BRD/PLV ನೇಮಕಾತಿ/267/2025 Date: 30.09.2025

## ಸುತ್ತೋಲೆ

## ಕಛೇರಿ ಆದೇಶ ಸಂಖ್ಯೆ 04/2025

ವಿಷಯ:- ಜಿಲ್ಲಾ ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕ (PLV) ರವರ ನೇಮಕಾತಿ ಬಗ್ಗೆ.

ಉಲ್ಲೇಖ:-1. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ 2009 ರ PLV ಯೋಜನೆ (ಪರಿಷ್ಕೃತ).
2. ಗೌರವಾನ್ವಿತ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: 01/PLV/2025 ದಿನಾಂಕ: 20.09.2025.

*****

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ 2009 ರ ಪಿ ಎಲ್ ವಿ ಯೋಜನೆ (ಪರಿಷ್ಕೃತ) ಉಲ್ಲೇಖ (1)ರ ಅನುಸಾರ ಜನ ಸಾಮಾನ್ಯರಿಗೆ ಕಾನೂನು ಅರಿವು ಮತ್ತು ಜಾಗೃತಿ ಮೂಡಿಸಿ ನ್ಯಾಯ ಒದಗಿಸುವ ಉದ್ದೇಶಕ್ಕಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಮಟ್ಟದಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರನ್ನು ನೇಮಕ ಮಾಡಿಕೊಳ್ಳುವ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲು ತಿಳಿಸಲ್ಪಟ್ಟಿರುತ್ತದೆ.

ಮುಂದುವರೆದು, ಉಲ್ಲೇಖ (2) ರಲ್ಲಿ ತಿಳಿಸಿರುವಂತೆ NALSA scheme ಗಳನ್ನು ವ್ಯವಸ್ಥಿತವಾಗಿ ಕಾರ್ಯಗತಗೊಳಿಸಲು ಅರೆಕಾಲಿಕ ಕಾನೂನು ಸ್ವಯಂ ಸೇವಕರ ಸಹಾಯ ಅತ್ಯವಶ್ಯವೆಂದು ತಿಳಿಸಿದ್ದು ಇರುತ್ತದೆ.

ಆದ್ದರಿಂದ ಉಲ್ಲೇಖ (1) ಮತ್ತು (2)ರಲ್ಲಿ ತಿಳಿಸಿರುವಂತೆ ಪ್ಯಾರ್ ಲೀಗಲ್ ವಾಲೆಂಟೀರ್ಸ್ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿ ದಿನಾಂಕ 30-09-2025 ರಿಂದ 20.10.2025 ರೊಳಗೆ ಪಟ್ಟಿಯನ್ನು ತಯಾರಿಸಿ ಈ ಪ್ರಾಧಿಕಾರಕ್ಕೆ ಕಳುಹಿಸಲು ಗೌರವಾನ್ವಿತ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬೆಂಗಳೂರು ಇವರಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ .

ಪ್ಯಾರಾ ಲೀಗಲ್ ವಾಲೆಂಟೀರ್ ನೇಮಕ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳು:-

1. ಅಧಿಸೂಚನೆ/ ಪ್ರಕಟಣೆ ಹೊರಡಿಸುವುದು:- ಟಿ ಎಲ್ ಎಸ್ ಸಿ, ವಕೀಲರ ಸಂಘ, ನ್ಯಾಯಾಲಯದಲ್ಲಿ, ತಾಲ್ಲೂಕು ಪಂಚಾಯತಿ ಮತ್ತು ಸಾರ್ವಜನಿಕ ಕಛೇರಿಗಳ ನೋಟೀಸ್ ಬೋರ್ಡುಗಳಲ್ಲಿ ಪ್ರಕಟಿಸುವುದು ಹಾಗೂ ವಿದ್ಯಾರ್ಹತೆ ಬಗ್ಗೆ ಸ್ಪಷ್ಟವಾಗಿ ತಿಳಿಸುವುದು.

2. ಶೈಕ್ಷಣಿಕ ಅರ್ಹತೆ :- ಕನಿಷ್ಠ ಎಸ್ ಎಸ್ ಎಲ್ ಸಿ ಉತ್ತೀರ್ಣರಾಗಿರಬೇಕು.

3. ಅರ್ಹತೆ :- ನಿವೃತ್ತ ಶಿಕ್ಷಕರು, ಹಿರಿಯ ನಾಗರಿಕರು, ಮಾಜಿ ಪಂಚಾಯಿತಿ ಸದಸ್ಯರುಗಳು, ಸರ್ಕಾರದ ಯಾವುದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಸರ್ಕಾರಿ ನೌಕರರು, ಕಾನೂನು ನೆರವು ಉಪಕ್ರಮಗಳಿಗೆ ನಿಜವಾಗಿಯೂ ಬದ್ಧರಾಗಿರುವ ಸಾಮಾಜಿಕ ಕಾರ್ಯಕರ್ತರು, ಮಹಿಳೆಯರು, ಮಂಗಳಮುಖಿಯರು, ಬುಡಕಟ್ಟು ಜನಾಂಗ ಮತ್ತು ಹಿಂದುಳಿದ ವರ್ಗದವರು ಮತ್ತು ಇತರೆ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು, ಸನ್ನಡತೆಯುಳ್ಳ ಮಾಜಿ ಖೈದಿಗಳು ಹಾಗೂ ಸನ್ನಡತೆಯುಳ್ಳ ಕಾರಾಗೃಹ ಬಂಧಿಗಳು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರುಗಳು, ಕಾನೂನು ವಿದ್ಯಾರ್ಥಿಗಳು.

4. ಸಂಭಾವನೆ:- ಸೇವಾ ಮನೋಭಾವ ಮಾತ್ರ ಇರುವಂತಹ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವವರಿಗೆ ಪ್ರಾಧಿಕಾರದಿಂದ ನಿಗಧಿಸಲ್ಪಡುವ ಗೌರವಧನ ನೀಡಲಾಗುವುದು (ನಿಗದಿತ ವೇತನ, ಮತ್ತು ಸಂಭಾವನೆ ಇರುವುದಿಲ್ಲ).

5. ತರಬೇತಿ :- ಆಯ್ಕೆಗೊಂಡ ಪಿ ಎಲ್ ವಿ ಗಳಿಗೆ ತರಬೇತಿ ಇರುವ ಬಗ್ಗೆ ತಿಳಿಸುವುದು .

6. ಅರ್ಜಿ:- ಅರ್ಜಿಗಳನ್ನು ಸ್ವೀಕೃತಿಗೊಳಿಸಲು 20 ದಿನಗಳ ಸಮಯ ನಿಗದಿಪಡಿಸುವುದು, ಸ್ವೀಕೃತಗೊಂಡ ಅರ್ಜಿಗಳಲ್ಲಿ ಅಂತಿಮ ಪಟ್ಟಿ ತಯಾರಿಸಿ, ಸದಸ್ಯ ಕಾರ್ಯದರ್ಶಿಯವರು ಪ್ರಕ್ರಿಯೆಯ ಉಸ್ತುವಾರಿ ಪಟ್ಟಿ ಅಂತಿಮಗೊಳಿಸುವುದು ( ಮಹಿಳೆ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳಿಗೆ ಪ್ರಾಧಾನ್ಯತೆ ) (ಅರ್ಜಿ ನಮೂನೆ ಲಗತ್ತಿಸಿದೆ), ಸುತ್ತೋಲೆಯನ್ನು ಮಾನ್ಯ ಪ್ರಭಾರ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

30/9/2025

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಅನುಮೋದಿಸಿದೆ.

30/9/2025

ಪ್ರಭಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಪ್ರತಿಯನ್ನು:-

1. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಪ ವಿಭಾಗಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಇಲಾಖೆ, ಜಿಲ್ಲಾ ಆಸ್ಪತ್ರೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯ ಕಛೇರಿಗಳ ನೋಟಿಸ್ ಬೋರ್ಡ್‌ಗೆ.
2. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ನೋಟಿಸ್ ಬೋರ್ಡ್ ಗೆ.
3. ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು ಬೆಂಗಳೂರು ಗ್ರಾಮಾಂತರ ಜಿಲ್ಲಾ ನೋಟಿಸ್ ಬೋರ್ಡಗೆ.
4. ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು ಬೆಂಗಳೂರು ಗ್ರಾಮಾಂತರ ಜಿಲ್ಲಾ ನೋಟಿಸ್ ಬೋರ್ಡಗೆ.
5. ಸದಸ್ಯ ಕಾರ್ಯದರ್ಶಿಗಳು, ತಾಲ್ಲೂಕು ಕಾನೂನು ಸೇವಾ ಸಮಿತಿ, ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಮತ್ತು ನೆಲಮಂಗಲ ಹಿರಿಯ ಮತ್ತು ಕಿರಿಯ ನ್ಯಾಯಾಧೀಶರ ನ್ಯಾಯಾಲಯ ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಮತ್ತು ನೆಲಮಂಗಲ ನೋಟಿಸ್ ಬೋರ್ಡ್‌ಗೆ.
6. ಅಧ್ಯಕ್ಷರು, ವಕೀಲರ ಸಂಘ ಬೆಂಗಳೂರು ಗ್ರಾಮಾಂತರ, ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಮತ್ತು ನೆಲಮಂಗಲ ಇವರಿಗೆ & ಸದರಿ ಪ್ರಕಟಣೆಯನ್ನು ತಮ್ಮ ಸಂಘದ ನೋಟಿಸ್ ಬೋರ್ಡ್‌ಗೆ ಲಗತ್ತಿಸಲು ವಿನಂತಿಯೊಂದಿಗೆ.
7. ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ್ಯಂತ ಇರುವ ಎಲ್ಲಾ ಕಾನೂನು ಮಹಾ ವಿದ್ಯಾಲಯಗಳಿಗೆ ಮಾಹಿತಿಯನ್ನು ರವಾನಿಸಲು.
8. ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ.
9. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಛೇರಿ ನೊಟೀಸ್ ಬೋರ್ಡಿಗೆ.
10. ವಾರ್ತಾ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಸದರಿ ಪ್ರಕಟಣೆಯನ್ನು ಸ್ಥಳೀಯ & ಪ್ರಮುಖ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ.
11. ಕಛೇರಿಯ ಪ್ರತಿ.
12. ಸಾಫ್ಟ್‌ವೇರ್ ಟೇಕ್ನಿಶಿಯನ್, ಜಿಲ್ಲಾ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ – ಇವರಿಗೆ ಆನ್‌ಲೈನ್ ಮೂಲಕ ವೆಬ್ ಹೊಸ್ಟ್ ಮಾಡಲು.

**:ಅರ್ಜಿ ನಮೂನೆ :**

ರವರಿಗೆ,

ಮಾನ್ಯ ಸದಸ್ಯ ಕಾರ್ಯದರ್ಶಿ ಗಳು,.
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಬೆಂಗಳೂರು

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಕಟಣೆ ಅನುಸಾರ ಅರೆಕಾಲಿಕ ಸ್ವಯಂ ಸೇವಕರ ಹುದ್ದೆಗೆ ನಾನು ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಪೂರ್ಣ ಹೆಸರು | | ವಿವರಗಳು |
|---|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | :: | |
| 2 | ತಂದೆಯ / ಗಂಡನ ಹೆಸರು | :: | |
| 3 | ವಯಸ್ಸು ಮತ್ತು ಪೂರ್ಣ ವಿಳಾಸ | :: | |
| 4 | ದೂರವಾಣಿ / ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ವಿಳಾಸ | :: | |
| 5 | ಜನ್ಮ ದಿನಾಂಕ : ವಯಸ್ಸು : | :: | |
| 6 | Caste: if brlongs SC/ST/OBC/ or categery General , Etc., Please Specifiy. | :: | |
| 7 | ರಾಷ್ಟ್ರೀಯತೆ : | :: | |
| 8 | ವಿದ್ಯಾರ್ಹತೆ | :: | |
| 9 | ಸೇವೆಗೆ ಸಲ್ಲಿಸಲು ಇಚ್ಛಿಸುವ ಸ್ಥಳ . ತಾಲ್ಲೂಕು ಕೇಂದ್ರ : ಜಿಲ್ಲಾ ಕೇಂದ್ರ : ನಮೂದಿಸಿ. | :: | |

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆ. ಪ್ರಾಧಿಕಾರದಲ್ಲಿ ಅರೆಕಾಲಿಕ ಸ್ವಯಂ ಸೇವಕನಾಗಿ ಕಾರ್ಯ ನಿರ್ವಹಿಸಲು ಸಿದ್ಧನಿದ್ದೇನೆ / ಸಿದ್ಧಳಿದ್ದೇನೆ.

ಸ್ಥಳ :
ದಿನಾಂಕ :

ಅಭ್ಯರ್ಥಿಯ ಸಹಿ